doc-151
T-P-2

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 151] ಶನಿವಾರ 16-2-46 [ಬಿಡಿ ಪ್ರತಿ 3 ಪೈ

ಭಾರತವನ್ನು ಕ್ಷಾಮದಿಂದ ರಕ್ಷಿಸಿ

ಸಂಸ್ಥಾನ ಸುದ್ದಿಗಳು

ಶಿವಮೊಗ್ಗಾ ಜಿಲ್ಲಾಧಿಕಾರಿಗಳಾದ ಶ್ರೀ ಜಾರ್ಜ್ ತಮ್ಮಾಥರವರ ಅಧ್ಯಕ್ಷತೆಯಲ್ಲಿ ತುಂಗಾ ಅಣೆಕಟ್ಟು ಯೋಜನೆ ಸಂಬಂಧದಲ್ಲಿ ವಲೇರಿಯಾ ನಿರೋಧೋಪಾಯ ಮುಂತಾದುವುಗಳನ್ನು ಪರಿಶೀಲಿಸಲು ತುಂಗಾ ಎಕ್ಸಿಕ್ಯೂಟಿವ್ ಸಮಿತಿ ಸ್ಥಾಪನೆಯಾಗಿದೆ.

ನಗರದ ಆರೋಗ್ಯದ ಕಡೆ ಅಧಿಕ ಗಮನ ಕೊಡಬೇಕೆಂದು ಬೆಂಗಳೂರು ಪೌರಸಭೆಯಲ್ಲಿನ ಸದಸ್ಯರುಗಳು ಸೂಚಿಸಿಯಿತ್ತಿರುವರು.

ಖಾಲಿ ಬಿದ್ದಿರುವ 11 ಸ್ಥಳಗಳ ಬೆಂಗಳೂರು ಪೌರಸಭಾ ಉಪಜಂತಾವಣಿಗೆ ನಾಲ್ವರು ಉಮೇದುವಾರಿಕೆಗೆ ಹಾಕಿಕೊಂಡಿರುವರು.

ಆಹಾರ ಪದಾರ್ಥಗಳ ಸರಬರಾಜು ತಿಳಿಸುವ ಪಾಸುಗಳನ್ನು ಬೆಂಗಳೂರಿನಲ್ಲಿ ಇದೇ ತಾ|| 22 ರಿಂದ 28 ರ ವರೆಗೆ ಹಿಂದೂ ಹೋಟೆಲುಗಳೂ, ಮಿಠಾಯಿ ಅಂಗಡಿಗಳು ಬಂದಾಗಬೇಕೆಂದು ತೀರ್ಮಾನಿಸಿದೆ.

ಅರ್ವಿನ್ ನಾಲಾ ಪ್ರದೇಶದಲ್ಲಿರಾಗಿ ಬೆರಯುವುದಕ್ಕೆ ಉತ್ತೇಜನ ಕೊಡತಕ್ಕ ವಿಚಾರಗಳನ್ನು ತಪಶೀಲು ತಿಳಿಸಿ ಮೈಸೂರು ಸರ್ಕಾರಿ ಪಬ್ಲಿಸಿಟಿ ಆಫೀಸರು ಬಂದು ಪ್ರಸಿದ್ಧಪತ್ರಿಕೆ ಪ್ರಕಟಿಸಿದ್ದಾರೆ.

ವಿವಿಧ ವೃತ್ತಾಂತ

ಕಾಮನ್ಸ್ ಸಭೆಯಲ್ಲಿ ನಡೆದ ಆಹಾರ ವಿಷಯದ ಚರ್ಚೆಯಲ್ಲಿ, ಬ್ರಿಟಿಷ್ನಿನಲ್ಲೂ ಹೆಚ್ಚು ಜೋಕಾಗಳು ಆಗುವ ಸೂಚನೆಯಿದೆ. ಆಹಾರ ವಸ್ತುಗಳಲ್ಲಿ ಕೇಕ್, ಬೆಣ್ಣೆ ಬಿಸ್ಕತ್ ಮತ್ತು ಅನ್ನವನ್ನು ವೈಸ್ರಾಯ್ ಭವನದಲ್ಲಿ ಸಹಾ ನಿಲ್ಲಿಸಲಾಗಿದೆ.

ಭಾರತಕ್ಕೆ ಸಯಾಂ ಅಕ್ಕಿ ಸಂಬರಾಜಿನ ಬಗ್ಗೆ ಕಾಮನ್ಸಿನಲ್ಲಿ ಪ್ರಶ್ನೆಗಳು ಕೇಳಲ್ಪಟ್ಟವು.

ವಿಶ್ವ ಸಂಸ್ಥೆಯಲ್ಲಿ ಭಾರತದ ಆಹಾರ ಪರಿಸ್ಥಿತಿಯನ್ನು ವಿವರಿಸುತ್ತಾ, ಸರ್ ರಾಮಸ್ವಾಮಿ ಮೊದಲಿಯಾರರು, ಭಾರತವನ್ನು ಬರದಿಂದ ಕಪ್ಪಿಸಬೇಕಾಗಿದೆ ಎಂದಿರುವರು.

ಪ್ಯಾರಿಸ್, 14— ಅಲ್ಜೀರಿಯಾದಲ್ಲಿ ಉಗ್ರವಾದ ಭೂಕಂಪವಾಗಿ 276 ಮಂದಿಗಳಿಗೆ ಸಾವು ಸೋವು ಆಗಿದೆ.

ಲಂಡನ್ ಫೆ, 15—ಭಾರತವನ್ನು ಕ್ಷಾಮದಿಂದ ರಕ್ಷಿಸಿರೆಂದು ಕಾಮನ್ಸ್ ಸಭೆಗೂ ಮತ್ತು ಸರಕಾರಕ್ಕೂ ಆಹಾರ ಚರ್ಚೆ ಸಂಬಂಧದಲ್ಲಿ ಪಾರ್ಲಿಮೆಂಟರಿ ನಿಯೋಗದ ಸದಸ್ಯರಾಗಿದ್ದ ಮಿ|| ನಿಕಲ್‌ಸನ್ನರು ಹೇಳಿದರು.

ಅನ್ನ ಭಾಷಣ

ವೈಸ್ರಾಯ್ ವೇವಲ್ ಈ ರಾತ್ರಿ 8—30 ಘಂಟೆಗೆ ದಿಹಲಿಯಿಂದ ಅನ್ನ ಪರಿಸ್ಥಿತಿ ಬಗ್ಗೆ ಆಕಾಶವಾಣಿ ಭಾಷಣ ಮಾಡುವರು

ಯುದ್ಧಪ್ರಚುರಣ ಶಾಖೆ

ದಿಹಲಿಯಲ್ಲಿ ಯುದ್ಧಪ್ರಚುರಣ ಶಾಖೆಯನ್ನು ಮುಚ್ಚುತ್ತಲಿರುವರು.

ಹಸಕ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ.
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

ಭಾರತದ ಆಹಾರ ಪರಿಸ್ಥಿತಿ ಬಗ್ಗೆ ಅಂಕಿ ಅಂಶ ಸಂಗ್ರಹಿಸಲು ಅಮೇರಿಕಾ ಸ್ಟೇಟ್ ಇಲಾಖೆ ಯತ್ನಿಸಿದೆ.

ಅವಕಾಶ ಒದಗಿದರೆ ಮಲೆಯಾಕ್ಕೆ ಹೋಗುವುದಾಗಿ ನೆಹರು ತಿಳಿಸಿದ್ದಾರೆ.

ಬೆಂಗಳೂರು ಫೆ, 13—ಯಾವಾಗ ಅಜ್ಜಿ ದೊರೆತರೆ ಆಗ ತಾವೂ ಮುಷ್ಕರ ಹಿಡಿಯಲು ಸಿದ್ಧರಿದ್ದೆವೆಂದು ಬೆಂಗಳೂರು ವೋಸ್ಮೆನ್ ಟವರ ಮಾಟಂಗಿನಲ್ಲಿ ನಿರ್ಣಯಿಸಲಾಯಿತು.

ಬೆಂಗಳೂರು ಫೆ. 12—ಯುದ್ಧಕಾಲದಲ್ಲಿ ಸಂಸ್ಥಾನದಲ್ಲಿ 383 ದೊಡ್ಡ ಕೈಗಾರಿಕಾ ಸಂಸ್ಥೆಗಳು ಕೆಲಸ ಮಾಡುತ್ತಿದ್ದವೆಂದೂ ಸಂತಾಸರಿ 81154 ಮಂದಿ ಕೆಲಸ ಮಾಡುತ್ತಿದ್ದರೆಂದೂ ಪ್ರಕಟಿಸಲಾಗಿದೆ.

ಬೊಂಬಾಯಿ ಫೆ, 14—ಬ್ರಿಟಿಷ್ನಿನ ವಾರ್ತಾನಗಳಲ್ಲಿ ನಂಬಿಕೆ ಇಲ್ಲ ಎಂದು ಮಿಸಸ್ ಅರಣ್ ಅಸಾಫ್ ಅಲಿಯವರು ಮಾಡಿದ ಭಾಷಣದಲ್ಲಿ ತಿಳಿಸಿದರು.

ಹೈದರಾಬಾದು ಫೆ. 13—ಶ್ರೀಮತಿ ಸರೋಜಿನೀ ದೇವಿಯವರ ವಜ್ರೋತ್ಸವ ಸಮಾರಂಭ ಕಾಲದಲ್ಲಿ 14 ಸ್ತ್ರೀ ಸಂಘಗಳ ಪರವಾಗಿ ಲೇಡಿ ಮೆಡ್ಡಿಯರ್ ಜಂಗರು ವಿಜ್ಞಾಪನ ಪತ್ರಿಕೆ ಅರ್ಪಿಸಿದರು. ಈ ಸಮಾರಂಭವು 7 ವರ್ಷಗಳ ಹಿಂದೆ ಆಗಿದ್ದರೂ, ಈಗ ದೇವಿಯವರು ಹೈದರಾಬಾದಿಗೆ ಬಂದಿರುವುದರಿಂದ ಅಲ್ಲಿಯ ಸ್ತ್ರೀವರ್ಗದ ಉತ್ಸಾಹದಿಂದ ನೆರವೇರಿಸಿದರು

ಕಲ್ಕತ್ತಾದಲ್ಲಿ ಪರಿಸ್ಥಿತಿ ಉತ್ತಮಗೊಂಡಿದೆ.

ಬೆಂಗಳೂರು ಫೆ, 14—ಸಂಸ್ಥಾನದಲ್ಲಿ ತುರ್ತು ಕಾರ್ಯಕ್ರಮ ಕೈಗೊಳ್ಳದಿದ್ದರೆ 5000 ಮಂದಿ ಗತ ಪ್ರಾಣರಾಗವರೆಂದು ಕಾಂ|| ಶ್ರೀ ನಿಜಲಿಂಗಪ್ಪನವರು ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ ಹೇಳಿದರೆಂದು ತಿಳಿಯಬಂದಿದೆ.

ನವ ದೆಹಲಿ ಫೆ, 14—1972—75 ರಲ್ಲಿ ಭಾರತಿಯಾಗುವ ಶೇಕಡ 3 ದರದ 29 ಕೋಟಿ ರೂಪಾಯಿ ಸಾಲವನ್ನು ಭಾರತ ಸರಕಾರವು ತೆಗೆಯುವುದಾಗಿದೆ.

ವಾಶಿಂಗ್‌ಟನ್ ಫೆ, 14—ಕಲ್ಕತ್ತಾದಲ್ಲಿನ ದುಃಖಮಯವಾದ ಪರಿಸ್ಥಿತಿಯು ಅಮೇರಿಕಾದಲ್ಲಿ ಚಿಂತಾಜನಕವಾಗಿರುವುದೆಂದು ಹೇಳಲಾಗಿದೆ.

ಲಂಡನ್ ಫೆ, 14—ಸ್ವತಂತ್ರಭಾರತದ ರಕ್ಷಣೆ ವಿಷಯದಲ್ಲಿ ಅಸಫಾಲಿಯವರು ಮುಖ್ಯ ಸೇನಾಧಿಪತಿಯೊಡನೆ ಮಾತು ಕತೆ ನಡೆಸುತ್ತಿರುವರೆಂದರು.

ಆಫ್ರಿಕಾಕ್ಕೆ ಗಾಂಧೀಜಿಯ ಪ್ರವಾಸವಿಲ್ಲ

ನಾಗಪುರ ಫೆ, 13—ಗಾಂಧೀಜಿಯವರು ತಾವು ದಕ್ಷಿಣ ಆಫ್ರಿಕಾಕ್ಕೆ ಹೋಗಲು ಇಚ್ಛೆ ಪಡುವುದಿಲ್ಲವೆಂದು ಡಾ|| ಖಾರೆಯವರಿಗೆ ತಿಳಿಸಿದಂತೆ ವರ್ತಮಾನ.

ಶ್ರೀ ಸಿ. ರಾಜಗೋಪಾಲಾಚಾರಿಯವರು ತಮ್ಮ ಕರ್ತವ್ಯ ಮಾಡಲಿಲ್ಲ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಜತೋತ್ಸವ ಸಂದರ್ಭದಲ್ಲಿ ಮದ್ರಾಸಿಗೆ ಬಂದಿದ್ದ ಗಾಂಧೀರವರು ದಕ್ಷಿಣ ದೇಶದಲ್ಲಿ ಪ್ರಮುಖ ನಾಯಕರಲ್ಲಿ ಒಬ್ಬರಾದ ಸಿ. ಆರ್. ರವರು ಈವರೆಗೂ ಹಿಂದೂಸ್ಥಾನೀ ಭಾಷೆಯನ್ನು ಕಲಿಯದೆ, ಇಂಗ್ಲಿಷು ಭಾಷೆಯಲ್ಲಿಯೇ ತನ್ನ ಸ್ವಾತಂತ್ರ್ಯವನ್ನು ನೋಡಿಸುತ್ತಿರುವುದನ್ನು ನಿರಸನೆ ಮಾಡಿದರು. ಹಿಂದೀ ಬಾರದ ಸಿ. ಆರ್. ರವರು ಮದ್ರಾಸ್ ರಾಷ್ಟ್ರದ ಕಾಂಗ್ರೆಸ್ ಮಂತ್ರಿಗಳಾಗಿದ್ದಾಗ ಪಾಠಶಾಲೆಗಳಲ್ಲಿ ಹಿಂದೀ ಭಾಷೆಯನ್ನು ನಿರ್ಬಂಧ ಭಾಷೆಯಾಗಿ ಏರ್ಪಾಡು ಮಾಡಿದ್ದರು. ತನಗೇ ಕೇಡವಾದುದನ್ನು ಇತರರಿಗೆ ಬಲವಂತ ಮಾಡುವುದು ಏಕೋ?

ಶ್ರೀ ಸುಭಾಷ್ ಬೋಸ್

'ನೇತಾಜಿ ಸುಭಾಷ್‌ಚಂದ್ರ ಬೋಸರು 1951 ರಲ್ಲಿ ಪುನಃ ಕಾಣಿಸಿಕೊಳ್ಳುವರಂತೆ. 1947 ರಲ್ಲಿ ಮೂಢನೇ ಜಾಗತಿಕ ಸಂಗ್ರಾಮವು ತೊಡಗುವುದು. ಬಾಗತಿಕ ಇತಿಹಾಸದಲ್ಲಿ ಅತ್ಯಂತ ದುರ್ಭಾಗ್ಯ ವರ್ಷವಾಗುವುದು ಆ ಇಸವಿ. 1948 ರಲ್ಲಿ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆಯುವುದು. ಬೋಸರ ಅವಸಾನವಾಗುವುದು ಭಾರತದಲ್ಲೇ 1951 ರಲ್ಲಿ ಇಂಡಿಯನ್ ರಿಪಬ್ಲಿಕಿನ ಅಧ್ಯಕ್ಷರಾಗಿಯೇ ಅವರು ಭಾರತಕ್ಕೆ ಮರಳುವರು ಎಂಬುದಾಗಿ ದೈನಿಕ ವಸುಮತಿ ಎಂಬ ಕಲ್ಕತ್ತಾ ಪತ್ರಿಕೆಯಲ್ಲಿ ಭವಿಷ್ಯ ಪ್ರಕಟವಾಗಿದೆ.

ಜಾವಾ ವಿಚಾರ

ಜಾವಾದಲ್ಲಿ ಎಲ್ಲಿ ನೋಡಿದರೂ ಹಿಂದೂ ಸಂಸ್ಕೃತಿಯೇ. ಅಲ್ಲಿಯ ಜನರು ರಾಮಾಯಣ ಮಹಾಭಾರತಗಳನ್ನು ಚನ್ನಾಗಿ ಅರಿತಿದ್ದಾರೆ ಎಂದು ಮಾಹಿಲಾಲ್ ದೇಶಾಯಿಯವರು ನುಡಿದಿರುವರು.

ಶ್ರೀ ಸ್ವಾಮಿ ವಿವೇಕಾನಂದರು ಹುಟ್ಟಿದ ಮನೆ

'ಇಲ್ಲಿ 1867 ರಲ್ಲಿ ಶ್ರೀ ಸ್ವಾಮಿಗಳ ವರ್ಣಾಶ್ರಮವನ್ನೆತ್ತಿದರು' ಎಂಬ ಶಿಲಾಶಾಸನವನ್ನು ಅತನು ಹುಟ್ಟಿದ ಮನೆಗೆ ಹಾಕಲು ಬಂಗಾಳಾ ಸರ್ಕಾರದವರು ನಿರ್ಧರಿಸಿರುವರು.

ಅನ್ನ ಭೇಟಿ

ಬರುವ ವಾರ ಭಾರತದ ಆಹಾರ ನಿಯೋಗದವರು, ಭಾರತ ಕಾರ್ಯದರ್ಶಿ ಲಾರೆನ್ಸರನ್ನು ಭೇಟಿಮಾಡುವರು.

ಇಂಡೋನೇಷಿಯಾದಲ್ಲಿ ಪ್ರಚಾರ

'ಒಂದ ವ್ಯಕ್ತಿಯು ನಿಲ್ಲನವರೆಗೂ ಬ್ರಿಟೀಷರೊಂದಿಗೆ ಹೋರಾಡಿ' ಎಂದು ಇಂಡೋನೇಷಿಯಾ ಸೈನಿಕ ಶಿಬಿರದಲ್ಲಿ ಒಬ್ಬ ಸ್ತ್ರೀಯು ಪ್ರಚಾರ ಮಾಡುತ್ತಿರುವಳು.

At Ranjit

TAQDEER

ತಾ||15—2—46ರಿಂದ

ತ ಕ ದಿ ರ್

ನಾಗೀನ್ಸ, ಮೋತಿಲಾಲ್, ಚಾರ್ಲ್

2 nd Week At Opera —

ಪರಂಜ್ಯೋತಿ

ವಿ. ಎ. ಜೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ ಬಾಲ ಸುಬ್ರಹ್ಮಣ್ಯಂ ಜಯಗೌರಿ ಕೃಷ್ಣ ಮಧುರಂ ಪಾತ್ರದಾರರು

ಮುಂದಿನ ವಿನೋದ

ಸುರೇಂದ್ರ, ನೇಹತಾಬ್

ಪಾತ್ರವಹಿಸಿರುವ

ವಿ ಶ್ವಾ ಸ್

Grand Auction Sale

By

The Bangalore Central Auction Hall

(Branch)

Behind Central Police Station, Mysore.

Will continue for 3 days ....

From Sunday 17–2–46

Cycles, Furniture, Timepieces, Wrist Watches, Silk & Lace clothes and many fancy goods.

Terms. Strictly Cash

No R 4 - 428/45

ಪ್ರ ಸಿ ದ್ಧ ಪ ತ್ರಿ ಕೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ಇದೇ ಫೆಬ್ರವರಿ ಮಾಹೆ 17 ನೇ ತಾರೀಖಿನಿಂದ ಮೈಸೂರು ಸಿಟಿಯಲ್ಲಿರುವ ಎಲ್ಲಾ "ಎ" ಮತ್ತು "ಬಿ" ತರಗತಿಯ ರೇಷನ್ ಕಾರ್ಡು ಹೋಲ್ಡರುಗಳಿಗೂ ಈ ಕೆಳಿಗೆ ಕಂಡಂತೆ ರೇಷನ್ ಪ್ರಮಾಣವನ್ನು ಇಳಿಸಲಾಗಿದೆ.

ಎ ತರಗತಿ ಇಸಂ 1 ಕ್ಕೆ 1 ಪಾವು ಅಕ್ಕಿ, ಕಾಲುಪಾವು ಗೋಧಿ. ರಾಗಿ ಅಥವಾ ಜೋಳ ಮುಂತಾದವು ಇಲ್ಲ.

ಬಿ ತರಗತಿ ಇಸಂ 1 ಕ್ಕೆ ಕಾಲುಪಾವು ಅಕ್ಕಿ ಅಥವಾ ಗೋಧಿ. 1 ಪಾವು ರಾಗಿ ಅಥವಾ ಜೋಳ ಮುಂತಾದವು.

ವಿ ಸ್ಕೂಲ್ ೫ ವರ್ಷಕ್ಕೆ ವಳಪಟ್ಟ ಮಕ್ಕಳಿಗೆ ಮೇಲ್ಕಂಡ ಪ್ರಮಾಣದಲ್ಲಿ ಅರ್ಧ ಭಾಗ ಮಾತ್ರ ಕೊಡಲಾಗುವುದು.

ಬಿ ಕ್ಲಾಸು ಹೋಲ್ಡರುಗಳಿಗೆ ರಾಗಿಗೆ ಬದಲು 2 ನೇ ಅಥವಾ 3 ನೇ ತರಗತಿಯ ಅಕ್ಕಿಯನ್ನು ಅಥವಾ ಇತರೆ ಪದಾರ್ಥಗಳನ್ನು ಕೊಡಲಾಗುವುದು.

(ಸಹಿ) ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್
ಮೈಸೂರು

ತಾ|| 15–2–46

ಸುಖ ಆರೋಗ್ಯ ಆನಂದದಾಯಕ



ಜೀ ವಿ ತ ಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೫-8-0 ಮಾತ್ರ.

ನಮ್ಮ ಸುಳಿಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ – ಧಾತುಪುಷ್ಟಿಗೆ

ಸಂ ಜೀ ವ ನ

ಶ ಕ್ತಿ ಸು ಧಾ

ಬೆಲೆ ಡಬ್ಬಿಗೆ ಕ್ಕೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing

L. N. Press

Sriramp et MYSORE